ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 902(1273)

ಸದಸ್ಯರ ಹೆಸರು: ಶ್ರೀ ಅಶೋಕ್ ಆರ್(ಉತ್ತರಹಳ್ಳಿ)

ಪ್ರಶ್ನೆ

ಅ) ಯಲಹಂಕ ಉಪ ನಗರ 5ನೇ ಹಂತದ ಬಡಾವಣೆಗೆ ಕೆಂಪೇಗೌಡ ಬಸ್ ನಿಲ್ದಾಣದಿಂದ ಓಡುತ್ತಿರುವ ನಗರ ಸಾರಿಗೆಯ ಎಕ್ಸ್‌ಪ್ರೆಸ್ ಬಸ್ ಇಲ್ಲದಿರುವುದು ನಿಜವೇ?

ಆ) ಹಾಗಿದ್ದಲ್ಲಿ ಲೋ ಫ್ಲೋರ್ ಎಕ್ಸ್‌ಪ್ರೆಸ್ ಬಸ್ ಓಡಿಸಲು ಕ್ರಮ ಕೈಗೊಳ್ಳಲಾಗುವುದೇ?

ಉತ್ತರಿಸಬೇಕಾದ ಸಚಿವರು: ಶ್ರೀ ಸಿ.ಆರ್.ಸಗೀರ್ ಅಹ್ಮದ್(ಸಾರಿಗೆ ಸಚಿವರು)

ಉತ್ತರ

ಅ) ಹೌದು.

ಆ) ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಯಲಹಂಕ ಉಪ ನಗರದ 5 ಮತ್ತು 4ನೇ ಹಂತದ ಪ್ರಯಾಣಿಕರ ಅನುಕೂಲಕ್ಕಾಗಿ ಕೆಂಪೇಗೌಡ ಬಸ್ ನಿಲ್ದಾಣಕ್ಕೆ ಮಾರ್ಗ ಸಂಖ್ಯೆ:402 ಡಿ ಯಲ್ಲಿ ಒಟ್ಟು 5 ಅನುಸೂಚಿಗಳನ್ನು ಸಾಮಾನ್ಯ ಬಸ್ಸುಗಳೊಂದಿಗೆ 53 ಏಕ ಮುಖ ಸುತ್ತುವಳಿಗಳೊಂದಿಗೆ ಆಚರಣೆ ಮಾಡಿ ಬಸ್ಸಿನ ಅನುಕೂಲ ಕಲ್ಪಿಸಿದೆ. ಸದ್ಯ ಸಂಸ್ಥೆಯಲ್ಲಿ ಲೋ ಫ್ಲೋರ್ ಬಸ್ಸುಗಳನ್ನು ವ್ಯಾಪಕೀಕರಿಸಿ ನಗರ ವಲಯಕ್ಕೆ ಸೀಮಿತಗೊಳಿಸಿ ಆಚರಣೆ ಮಾಡಲಾಗುತ್ತಿದ್ದು, ಯಲಹಂಕ ಉಪನಗರದ 5ನೇ ಹಂತದ ಬಡಾವಣೆಗೆ ಲೋ ಫ್ಲೋರ್ ಎಕ್ಸ್‌ಪ್ರೆಸ್ ಬಸ್ಸನ್ನು ಆಚರಣೆ ಮಾಡುವ ಯೋಜನೆ ಸದ್ಯಕ್ಕೆ ಇರುವುದಿಲ್ಲ.

ಬೆಂಗಳೂರು ನಗರ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಕೆ.ಪಿ.ಟಿ.ಸಿ.ಎಲ್.ಗೆ ಗೃಹ ಬಳಕೆ ವಿದ್ಯುತ್ ಸಂಪರ್ಕಕ್ಕೆ ಠೇವಣಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 903(1174)

ಸದಸ್ಯರ ಹೆಸರು: ಶ್ರೀ ಅಶೋಕ್ ಆರ್.(ಉತ್ತರಹಳ್ಳಿ)

ಪ್ರಶ್ನೆ

ಅ) ಬೆಂಗಳೂರು ನಗರ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಗೃಹ ಬಳಕೆಗೆ ವಿದ್ಯುತ್

ಸಂಪರ್ಕ ಪಡೆಯಲು ಗ್ರಾಹಕರು ಎಷ್ಟು ಠೇವಣಿ ನೀಡಬೇಕಾಗಿದೆ? ಸರ್ಕಾರಿ ಬಡಾವಣೆ, ಖಾಸಗಿ ಬಡಾವಣೆ ಹಾಗೂ ರೆವಿನ್ಯೂ ನಿವೇಶನಗಳಿಗೂ ಈ ಠೇವಣಿ ದರ ಸಾಮಾನ್ಯವಾಗಿರುವುದೇ ಅಥವಾ ವ್ಯತ್ಯಾಸಗಳೇನಾದರೂ ಇದೆಯೇ? (ವಿವರ ನೀಡುವುದು)

ಆ) ಠೇವಣಿ ಜೊತೆ ಕೆ.ಪಿ.ಟಿ.ಸಿ.ಎಲ್.ಗೆ ಯಾವುದಾದರೂ ಸಂಪರ್ಕ ಶುಲ್ಕವನ್ನು ನೀಡಬೇಕಾಗಿದೆಯೇ?

ಇ) ನಿಗದಿತ ಠೇವಣಿಗಿಂತ ಹೆಚ್ಚಿಗೆ ಅಥವಾ ಕಡಿಮೆ ಠೇವಣಿಯನ್ನು ಪಾವತಿಸಿಕೊಂಡು ವಿದ್ಯುತ್ ಸಂಪರ್ಕ ನೀಡಿದ ಪ್ರಕರಣಗಳೇನಾದರೂ ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ ಎಷ್ಟು ಪ್ರಕರಣಗಳು ನಗರ ಹಾಗೂ ಬೆಂಗಳೂರು ಗ್ರಾಮಾಂತರ ಪ್ರದೇಶದಲ್ಲಿ ಕಂಡು ಬಂದಿದೆ? ವಿವರಗಳನ್ನು ನೀಡುವುದು.

ಈ) ಇಂತಹ ಪ್ರಕರಣಗಳ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳಾವುವು?

ಉತ್ತರಿಸುವ ಸಚಿವರು: ಶ್ರೀ ವೀರಕುಮಾರ್ ಅ. ಪಾಟೀಲ್(ಇಂಧನ ರಾಜ್ಯ ಸಚಿವರು)

ಉತ್ತರ

ಅ) ಬೆಂಗಳೂರು ನಗರ ಹಾಗೂ ಗ್ರಾಮಾಂತರ ಪ್ರದೇಶದಲ್ಲಿ ಗೃಹ ಬಳಕೆಗೆ ಸಂಪರ್ಕ ಪಡೆಯಲು ಗ್ರಾಹಕರು ಈ ಕೆಳಕಂಡ ಠೇವಣಿಯನ್ನು ಕೊಡಬೇಕಾಗಿರುತ್ತದೆ.

ಮಾಪಕ ಠೇವಣಿ	ಭದ್ರತಾ ಠೇವಣಿ
ರೂ.1010.00	1. 250 ವ್ಯಾಟ್‌ನವರೆಗೆ ರೂ.80.00
	2. 251 ರಿಂದ 500 ವ್ಯಾಟ್‌ವರೆವಿಗೆ ರೂ.120.00
	3. 501 ರಿಂದ 750 ವ್ಯಾಟ್‌ವರೆವಿಗೆ ರೂ.170.00
	4. 751 ರಿಂದ 1000 ವ್ಯಾಟ್ ವರೆವಿಗೆ ರೂ.240.00

ಸರ್ಕಾರಿ ಬಡಾವಣೆ, ಖಾಸಗಿ ಬಡಾವಣೆ ಹಾಗೂ ರೆವಿನ್ಯೂ ನಿವೇಶನಗಳಿಗೂ ಮೇಲೆ ತಿಳಿಸಿದ ಮಾಪಕ ಮತ್ತು ಭದ್ರತಾ ಠೇವಣಿ ಅನ್ವಯಿಸಲ್ಪಡುತ್ತದೆ.

ಆ) ವಿದ್ಯುತ್ ಸಂಪರ್ಕ ನೀಡುವಾಗ ಠೇವಣಿ ಜೊತೆಯಲ್ಲಿ ವಿದ್ಯುತ್ ಶುಲ್ಕವನ್ನು ನೀಡಬೇಕಾಗಿರುತ್ತದೆ.

ಇ ಮತ್ತು ಈ) ಇಂತಹ ಪ್ರಕರಣಗಳು ಗಮನಕ್ಕೆ ಬಂದಿರುವುದಿಲ್ಲ

ರಸ್ತೆ ಪಕ್ಕದ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಕೊಡುವಾಗ ಅನುಸರಿಸಬೇಕಾದ ಮಾನದಂಡ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 904(1077)

ಸದಸ್ಯರ ಹೆಸರು: ಶ್ರೀ ಅಪ್ಪಚ್ಚುರಂಜನ್ ಎಂ.ಪಿ.(ಸೋಮವಾರಪೇಟೆ)

ಪ್ರಶ್ನೆ

ಅ) ರಸ್ತೆ ಪಕ್ಕದಲ್ಲಿರುವ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಕೊಡುವಾಗ ಯಾವ ಮಾನದಂಡದ ಮೇಲೆ ವಿದ್ಯುತ್ ಸಂಪರ್ಕ ನೀಡಲಾಗುವುದು?

ಆ) ರಸ್ತೆ ಪಕ್ಕ ಸಂಪರ್ಕ ನೀಡಿದರೆ ರಸ್ತೆ ವಿಸ್ತರಿಸುವಾಗ ತೊಂದರೆಯಾಗುವುದಿಲ್ಲವೆ? ಇದರ ಬಗ್ಗೆ ಏನು ಕ್ರಮ ಕೈಗೊಳ್ಳಲಾಗುವುದು?

ಇ) ಕೊಡಗು ಜಿಲ್ಲೆ ಸೋಮವಾರಪೇಟೆ ತಾಲ್ಲೂಕು ಕೊಡ್ಲಿಪೇಟೆ ಹೋಬಳಿ, ಮಲಗನಹಳ್ಳಿ, ಮಾವಿನಹಳ್ಳಿಯಲ್ಲಿ ವಿದ್ಯುತ್ ಸಂಪರ್ಕ ಕಾಮಗಾರಿ ಪೂರ್ಣಗೊಂಡಿದೆಯೇ? ಇಲ್ಲದಿದ್ದಲ್ಲಿ ಯಾವಾಗ ಪೂರ್ಣಗೊಳಿಸಲಾಗುವುದು?

ಉತ್ತರಿಸುವ ಸಚಿವರು: ಶ್ರೀ ವೀರಕುಮಾರ ಅ. ಪಾಟೀಲ್(ಇಂಧನ ರಾಜ್ಯ ಸಚಿವರು)

ಉತ್ತರ

ಅ) ಇತರೆ ಬಾವಿಗಳಿಗೆ ಅನ್ವಯವಾಗುವ ಮಾನದಂಡವನ್ನೆ ರಸ್ತೆ ಬದಿಯ ಕೊಳವೆ ಬಾವಿಗಳಿಗೂ ಅನ್ವಯಿಸಲಾಗುತ್ತದೆ. ಈ ರಸ್ತೆ ಬದಿಯ ಕೊಳವೆ ಬಾವಿಗಳು ರೈತರ ಜಮೀನಿನಲ್ಲಿರಬೇಕಿದ್ದು, ಅದಕ್ಕೆ ಸಂಬಂಧಪಟ್ಟ ಕಂದಾಯ ಇಲಾಖೆಯಿಂದ ''ವಾಟರ್ ರೈಟ್'' ದೃಢೀಕರಣ ಪತ್ರವನ್ನು ತರಬೇಕಾಗಿರುತ್ತದೆ.

ಆ) ಕೊಳವೆ ಬಾವಿಗಳು ರೈತರ ಜಮೀನಿನಲ್ಲಿದ್ದು, ಅವುಗಳು ರಸ್ತೆ ಬದಿಯಲ್ಲಿದ್ದರೆ ಅಂತಹ ಸಂದರ್ಭದಲ್ಲಿ ರಸ್ತೆ ವಿಸ್ತರಿಸುವಾಗ ಸಂಬಂಧಪಟ್ಟ ಇಲಾಖೆಯು ರೈತರಿಗೆ ಜಮೀನು ಒತ್ತುವರಿಗಾಗಿ ಪರಿಹಾರಧನ ನೀಡುವುದಲ್ಲದೆ ಅಂತಹ ಕೊಳವೆಬಾವಿಗಳನ್ನು ಸ್ಥಳಾಂತರಿಸಲು ಆಗುವ ವೆಚ್ಚವನ್ನು ಸಹ ಭರಿಸಬೇಕಾಗುತ್ತದೆ.